ಒದಗಿಬರುವ, ನಮ್ಮ ಕಷ್ಟಗಳನ್ನು ನಾವು ಹೇಳದೆಯೇ ಅರ್ಥ ಮಾಡಿಕೊಳ್ಳಬಲ್ಲ, ಇವನು ನಮಗೆ ಒಲಿದಿದ್ದಾನೆ ಅಂದುಕೊಳ್ಳುವಷ್ಟರಲ್ಲಿಯೇ ಇಡೀ ಲೋಕವನ್ನು ಬಾಚಿ ತಬ್ಬಿ 'ಅಯ್ಯೋ ಕಂದಗಳಿರಾ' ಎಂದು ನಮ್ಮ ಜೊತೆಯಲ್ಲೇ, ನಮ್ಮಷ್ಟೇ ನೊಂದುಕೊಳ್ಳುತ್ತಾನೆ. ಕೊನೆಗೆ ಬಾ ಇಲ್ಲಿ ಎಲ್ಲ ಸರಿ ಮಾಡೋಣ, ಯಾಕಿಷ್ಟು ಚಿಂತೆ ಎಂದು ಕೌನ್ಸಿಲಿಂಗ್ ಮಾಡುತ್ತಾ, ನಮಗೇ ಗೊತ್ತಿಲ್ಲದಂತೆ ನಮ್ಮನ್ನು ಬದುಕಿನ ಆಗುಹೋಗುಗಳಿಗೆ ಸಜ್ಜು ಮಾಡಿ, ಆಯ್ತು , ಇನ್ನು ಬದುಕಿಕೋ ಹೋಗು ಎಂದು ಕಳಿಸುವ 'ಅಭಯ ವ್ಯಕ್ತಿತ್ವ'ಕ್ಕಾಗಿ ನಾವೆಲ್ಲೋ ಕಾಯುತ್ತಲೇ ಇರುತ್ತೇವೆ ಅನ್ನಿಸುತ್ತದೆ. ಆದ್ದರಿಂದಲೇ ಒಂದು ವ್ಯಕ್ತಿತ್ವಕ್ಕೆ ವಿಶೇಷ ಶಕ್ತಿ ಎನ್ನುವ ಗಾಳಿಸುದ್ದಿಯನ್ನೂ ಹಿಂದೆ ಮುಂದೆ ನೋಡದೇ ಆತುಕೊಳ್ಳಲು ಹಾತೊರೆಯುವುದು.

ಆದರೆ ಬಿಂದು ಮಾಧವ ಕಾದಂಬರಿಯ ಮುಖಪುಟದಲ್ಲಿಯೇ ಹೇಳುವಂತೆ, 'ದೇವರ ಸಾಮ್ರಾಜ್ಯದ ಸಮಾಜವಾದಿ'. ಸಮಾಜವಾದಿ ಎನ್ನುವ ಆಧುನಿಕ ಜನನಾಯಕನ ಚೌಕಟ್ಟಿನಲ್ಲಿ ಕೂಡಿಸುವ ಮೂಲಕವೇ ಕಾದಂಬರಿಕಾರರು ಬಿಂದುಮಾಧವನ ವ್ಯಕ್ತಿತ್ವದ ಗುಣಲಕ್ಷಣಗಳನ್ನು ನಿರ್ಧರಿಸಿಬಿಡುತ್ತಾರೆ. ಅವನು ವರ ಕೊಡುವ, ಪವಾಡ ಮಾಡುವ ಜನರನ್ನು ಈ ಮೂಲಕವೇ ಬೆರಗಿನಲ್ಲೇ ಬೆಚ್ಚಿಬೀಳಿಸಿ ಭಯ ಮತ್ತು ಅಭಯಗಳ ಗೆರೆಯನ್ನೇ ಅಳಿಸಿಬಿಡುವ ಪೈಕಿಯವನಲ್ಲ. ಅವನು ಸೇದುತ್ತಿದ್ದ ಬೀಡಿಯ ಕೊರೆಯನ್ನೇ ತಾಯಿತವಾಗಿಸಬಲ್ಲ ಶಕ್ತಿಯವನು. ಮುಚ್ಚಿದ ತೋಳಿನಿಂದ ಬೂದಿ ಕೊಡುವವನಲ್ಲ, ಕಣ್ಕಟ್ಟು ಮಾಡುವವನೂ ಅಲ್ಲ. ನೋಡ ನೋಡುತ್ತಲೇ ನಮ್ಮ ಕಣ್ಣೆದುರಿಗೇ ನಮ್ಮನ್ನು ಪಾರು ಮಾಡಬಲ್ಲವನ ಬಗೆಗೆ ನಂಬಿಕೆ ತಾನಾಗಿಯೇ ಹುಟ್ಟುತ್ತದೆ. ಆದರೆ ಬಿಂದು ಮಾಧವನ ಮಟ್ಟಿಗೆ ಇವೆಲ್ಲ ನಗಣ್ಯ. ನಿಜಕ್ಕೂ ಅವನಿಗೆ ಆಸಕ್ತಿ ಇರುವುದು, ಹಸಿದವರಿಗೆ ಅನ್ನ ಹಾಕುವುದರಲ್ಲಿ, ತಾನು ಸಸ್ಯಾಹಾರಿಯಾಗಿದ್ದಾಗಲೂ ಬಂದ ಮಾಂಸಾಹಾರಿ ಅತಿಥಿಗಳಿಗೆ ಮಾಂಸಾಹಾರ ತರಿಸಿ ಬಡಿಸಿ ಅವರ ಸಂತೋಷದಲ್ಲಿ ತನ್ನ ಸಂತೋಷ ಕಾಣುವವನು. ನೆಲವನ್ನು ಉಳುವವನು, ದೇವರನ್ನು ಜನಪರ ಕೆಲಸಗಳಿಗೆ ಅನುನಯದಲ್ಲಿ, ಜಗಳವಾಡಿ, ಕೂಗಾಡಿ ಒಪ್ಪಿಸುವವನು. ತನ್ನ ಕಾಯಕ ದಾಸೋಹದ ಮೂಲಕವೇ ಜನರಲ್ಲಿ ಕಾಯಕದ ಬಗ್ಗೆ ನಿಷ್ಠೆ ಮತ್ತು ಪ್ರೀತಿಯನ್ನು ಹುಟ್ಟಿಸುವವನು.

ಈ ಬಿಂದುಮಾಧವ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ನಿರೀಕ್ಷಿಸುವ 'ಜನನಾಯಕ'ನೂ ಆಗಿದ್ದಾನೆ. ಬಹುಶಃ ಈ ಗುಣವೇ ಓದುಗರನ್ನು ಬಹುವಾಗಿ ಆಕರ್ಷಿಸುತ್ತದೆ. ಅವನನ್ನು ಅಲೌಕಿಕನೆಂದು ಒಪ್ಪಲು ನಾವು ಸಿದ್ಧರಾಗುವುದು ಕೂಡ ಈ ಕಾರಣಕ್ಕೇ ಅನ್ನಿಸುತ್ತದೆ. 'ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವ'ರಷ್ಟೇ. ಇಂದಿನ ದೇವಮಾನವರಿಗಿಂತ ಈತ ನಿರ್ಣಾಯಕವಾಗಿ ಭಿನ್ನನಾಗುವುದು ಆತ ಎಂದಿಗೂ ತನ್ನನ್ನು ನಂಬಿ ಆರಾಧಿಸುವ ಸತ್ಯವನ್ನು 'ಬಂಡವಾಳ'ವಾಗಿ ಹೂಡುವುದಿಲ್ಲ ಎನ್ನುವ ಕಾರಣಕ್ಕೆ. ಅನುಯಾಯಿಗಳನ್ನು, ಆರಾಧಕರನ್ನು ಬಿಂದುಮಾಧವ 'ಆತ್ಮ'ಗಳಾಗಿ ಕಾಣುತ್ತಾನೆಯೇ ಹೊರತು, ತನ್ನ ವಂದಿಮಾಗಧರಾಗಿ ಅಲ್ಲ.

'ಕೊಡುವುದೇನು ಕೊಂಬುದೇನು ಒಲವು ಸ್ನೇಹ ಪ್ರೀತಿ'

ಇದು ಬಿಂದುಮಾಧವ ತನ್ನ ಜೊತೆಯ ಜನರೊಂದಿಗೆ, ತಾನೂ ಒಂದಂಗ ಎಂದು ಭಾವಿಸಿದ ಪ್ರಕೃತಿಯ ಜೊತೆಗೆ, ತಾನು ಮನಸಾರೆ ನಂಬಿ ನಚ್ಚಿದ ದೇವರೊಂದಿಗೂ ಹೊಂದಿದ್ದ ಸಂಬಂಧ. ಬುದ್ಧನನ್ನು ಪ್ರೇಮಭಿಕ್ಷು ಎನ್ನುತ್ತೇವಲ್ಲ ಹಾಗೆಯೇ ಈ ಬಿಂದುಮಾಧವನೂ ಪ್ರೇಮಭಿಕ್ಷುವೇ. ಆದರೆ ಇವನ ಮೇಲೆ ಬುದ್ಧನಿಗಿಂತ ಶರಣರ ಪ್ರಭಾವವೇ ಹೆಚ್ಚು ಎನ್ನುವುದು ಈ ಕಾದಂಬರಿಯ ಶಕ್ತಿಯನ್ನು ಹೆಚ್ಚಿಸಿರುವ ಸಂಗತಿಯಾಗಿದೆ.